# ಪ್ರಶ್ನೆ:

# “ಒಂದು ಅಪೊಸ್ತೊಲಿಕ ಉದಾಹರಣೆಯು ಯಾವಾಗ ಬಂಧನಕಾರಿಯಾಗುವುದು?”

## ಉತ್ತರ:

ದೈವಿಕ ಮಾದರಿಯ ವಿಷಯವನ್ನು ಕುರಿತು ಆಗಾಗ, ಉದ್ಭವಿಸುವ ಪ್ರಶ್ನೆಯು, “ಒಂದು ಅಪೊಸ್ತೊಲಿಕ ಉದಾಹರಣೆಯು ಯಾವಾಗ ಬಂಧನಕಾರಿಯಾಗಿರುತ್ತದೇ?” ಎಂಬುದು ನಮ್ಮ ಕರ್ತನ ಅಪೊಸ್ತಲರು ಕಟ್ಟುವಂಥದ್ದು ಮತ್ತು ಬಿಚ್ಚುವಂಥದ್ದು ನ್ಯಾಯ ತೀರ್ವಿಕೆಯ ದಿನದವರೆಗೆ ಕಟ್ಟಿಸಲ್ಪಟ್ಟಿರಬೇಕು ಇಲ್ಲವೇ ಬಿಚ್ಚಲ್ಪಟ್ಟಿರಬೇಕು ಎಂಬುದರ ಬಗ್ಗೆ ಪರಿಶುದ್ಧ ಬರಹಗಳು ಸ್ಪಷ್ಟವಾಗಿವೆ (ಮತ್ತಾಯ 16:19; 18:18). ಅಪೊಸ್ತಲರು ದೇವಾಲಯದಲ್ಲಿ (ಅಪೊಸ್ತಲರ ಕೃತ್ಯಗಳು 2:46), ಶಾಲೆಯಲ್ಲಿ (ಅಪೊಸ್ತಲರ ಕೃತ್ಯ ಗಳು 19:9), ಮನೆಗಳಲ್ಲಿ (ಅಪೊಸ್ತಲರ ಕೃತ್ಯಗಳು 5:42) ಮತ್ತು ನದಿಯ ಪಕ್ಕದಲ್ಲಿ (ಅಪೊಸ್ತಲರ ಕೃತ್ಯಗಳು 16:13) ಬೋಧಿಸುವ ಉದಾಹರಣೆಗಳನ್ನು ಇಟ್ಟಿರುವದನ್ನು ಒಬ್ಬನು ಗಮನಿಸುವಾಗ, ಅವನು “ಯಾವ ಉದಾಹರಣೆಯು ಬಂಧನಕಾರಿಯಾಗಿದೆ?” ಎಂದು ಕೇಳುವ ಅವಶ್ಯಕತೆಯಿರುವದಿಲ್ಲ. ಈ ಯಾವುದೇ ಸ್ಥಳಗಳಲ್ಲಿ ನಾವು ಪ್ರಸಂಗಿಸಬಹುದು.

ತನ್ನ ಚಿತ್ತವನ್ನು ಕಲಿತುಕೊಳ್ಳುಲು ನಾವು ಅಧ್ಯಯನ ಮಾಡಬೇಕೆಂದು ದೇವರು ಬಯಸುತ್ತಾನೆ (1 ತಿಮೊಥೆ 4:13; ಎಫೆಸ 5:17). ಕೆಲವು ವಿಷಯಗಳಲ್ಲಿ ಯಾವುದು ಸರಿ ಎಂಬುದನ್ನು ನಮ್ಮೊಳಗೆ ನಾವೇ ನಿರ್ಣಯಿಸಿಕೊಳ್ಳಬೇಕು (ಲೂಕ 12:57). ಹೀಗಿದ್ದರೂ, ದೈವಿಕ ತತ್ವವು ಒಳಗೊಂಡಿರುವಾಗ, ಆಗ ಮತ್ತು ಆಗ ಮಾತ್ರವೇ ಅಪೊಸ್ತೊಲಿಕ ಉದಾಹರಣೆಯು ಬಂಧನಕಾರಿಯಾಗಿರುವುದು.

ಒಂದು ತತ್ವವು ಕೃತ್ಯದ ಒಂದು ನಿಯಮ ಇಲ್ಲವೇ ಒಂದು ಮಟ್ಟ ಆಗಿರುತ್ತದೆ. ಪರಿಶುದ್ಧ ಬರಹಗಳು “ಮೂಲ ಪಾಠಗಳ” ಬಗ್ಗೆ ಮಾತಾಡುತ್ತವೆ (ಇಬ್ರಿಯ 5:12; ನೋಡಿರಿ 6:1). ಒಂದು ನಿಶ್ಚಿತವಾದ “ನಿಯಮ” ಇಲ್ಲವೇ “ಸೂತ್ರದಿಂದ” ನಡೆಯ ಬೇಕೆಂದು ನಾವು ಆಜ್ಞಾಪಿಸಲ್ಪಟ್ಟಿದ್ದೇವೆ (ಗಲಾತ್ಯ 6:16; ಫಿಲಿಪ್ಪ 3:16).

ಅಪೊಸ್ತಲರ ಕೃತ್ಯಗಳು 2:38, 41, 42ರಲ್ಲಿ ನಿಶ್ಚಿತವಾದ ಪ್ರಥಮ ತತ್ವಗಳ ಬಗ್ಗೆ ಮತ್ತು ಪರಿಪೂರ್ಣಗೊಳಿಸುವ ತತ್ವಗಳ ಬಗ್ಗೆ ಓದುತ್ತೇವೆ. ಕ್ರಿಸ್ತನೊಳಗೆ ಬರುವದಕ್ಕಾಗಿ ಮತ್ತು ಕ್ರಿಸ್ತನಲ್ಲಿ ಮುಂದುವರಿಯುವದಕ್ಕಾಗಿ ಇಲ್ಲಿ ತತ್ವಗಳು ನೇಮಿಸಲ್ಪಟ್ಟಿವೆ ಎಂದು ಬೇರೆ ಮಾತಿನಲ್ಲಿ ಹೇಳಬಹುದು. ಇದನ್ನು ಕುರಿತು ಪರ್ಯಾಯವಾದವುಗಳು ದೇವರ ವಾಕ್ಯದಲ್ಲಿ ಕೊಡಲ್ಪಟ್ಟಿರುವದಿಲ್ಲ. ಆದುದರಿಂದ ಈ ಉದಾಹರಣೆಯು ಬಂಧನಕಾರಿಯಾಗಿದೆ.

ಅಪೊಸ್ತಲರ ಕೃತ್ಯಗಳು 2:44ರಲ್ಲಿ ಆದಿ ಸಭೆಯಲ್ಲಿ ಸಮಾಜದ ಆಸ್ತಿಯನ್ನು ಹಂಚಿಕೊಳ್ಳುವದರ ಬಗ್ಗೆ ಓದುತ್ತೇವೆ. ಇದು ಬಂಧಿಸುವ ಉದಾಹರಣೆಯಾಗಿರುವುದೋ? ಇಲ್ಲ, ಯಾಕಂದರೆ, ಒಬ್ಬನ ವಸ್ತುಗಳನ್ನು ಸಂಪೂರ್ಣವಾಗಿ ಸಮರ್ಪಿಸುವುದು ಅವನ ಆಯ್ಕೆಗೆ ಬಿಟ್ಟಿತ್ತೆಂದು ಅಪೊಸ್ತಲರ ಕೃತ್ಯಗಳು 5:4 ಸ್ಪಷ್ಟಪಡಿಸುತ್ತದೆ.

ಅಪೊಸ್ತಲರ ಕೃತ್ಯಗಳು 6ರಲ್ಲಿ, ಸಭೆಯ ಸೇವೆಗಾಗಿ ಏಳು ಜನರು ಆಯ್ಕೆಮಾಡಿಕೊಳ್ಳಬೇಕಾಗಿದ್ದಾಗ, ಅಪೊಸ್ತಲರೂ ಸಹ ಜನರ ಹೆಸರುಗಳನ್ನು ಹೇಳಲು ಊಹಿಸಲಿಲ್ಲ. ಜನರನ್ನು ಸಭೆಯು ಆಯ್ಕೆ ಮಾಡಿಕೊಳ್ಳಬೇಕೆಂಬುದು ಅಪೊಸ್ತಲಿಕ ಉದಾಹರಣೆಯಾಗಿತ್ತು (ಅಪೊಸ್ತಲರ ಕೃತ್ಯಗಳು 6:3). ಪ್ರತಿಯೊಂದು ಸ್ಥಳಿಕ ಸಭೆಯ ವಿಷಯದಲ್ಲಿ ಸ್ವಯಂ - ಆಡಳಿತೆಯನ್ನು ಬಿಟ್ಟು ಹೊಸ ಒಡಂಬಡಿಕೆಯಲ್ಲಿ ಬೇರೆ ಉದಾಹರಣೆಗಳನ್ನು ನಾವು ಕೊಂಡುಕೊಳ್ಳದೇ ಇರುವದರಿಂದ, ಈ ಅಪೊಸ್ತಲಿಕ - ಉದಾಹರಣೆಯು ಬಂಧನಕಾರಿಯಾಗಿದೆ. ಪರಿಶುದ್ಧ ಬರಹಗಳಲ್ಲಿ ಬೇರೆ ಪರ್ಯಾಯಗಳು ಕೊಡಲ್ಪಟ್ಟಿರುವದಿಲ್ಲ.

ಅಪೊಸ್ತಲರ ಕೃತ್ಯಗಳು 8:9-24ರಲ್ಲಿ, ತಪ್ಪು ಮಾಡುವ ದೇವರ ಮಗುವು ದೇವರ ಮೆಚ್ಚಿಕೆಗೆ ಹೇಗೆ ತಿರುಗಿಕೊಳ್ಳಬೇಕೆಂಬುದರ ನಿಯಮವನ್ನು ಓದುತ್ತೇವೆ. ಮಾನಸಾಂತರ ಮತ್ತು ಪ್ರಾರ್ಥನೆಯಲ್ಲದೇ ಇತರ ವಿಧಾನಗಳ ಬಗ್ಗೆ ನಾವು ಓದಿದರೆ, ಆಗ ಅಪೊಸ್ತಲರ ಕೃತ್ಯಗಳು 8ರಲ್ಲಿಯ ಉದಾಹರಣೆಯು ಬಂಧನ ಕಾರಿಯಾಗಿದೆ ಎಂದು ನಾವು ಹೇಳಲಾರೆವು. ಹಾಗಿದ್ದರೂ, ಪರಿಶುದ್ಧ ಬರಹಗಳಲ್ಲಿ ಬೇರೆಲ್ಲಿಯೂ ಯಾವುದೇ ವಿಧಾನವು ಕೊಡಲ್ಪಟ್ಟಿರುವದಿಲ್ಲ.

ಅಪೊಸ್ತಲರ ಕೃತ್ಯಗಳು 11:22ರಲ್ಲಿ ಸುವಾರ್ತಾ ಪ್ರಸಂಗಿಯನ್ನು ಕಳುಹಿಸುವದರಿಂದ ಒಂದು ಸಭೆಯು ಇನ್ನೊಂದು ಸಭೆಯೊಂದಿಗೆ ಸಹಕರಿಸಬಹುದು ಎಂಬುದನ್ನು ನೋಡುತ್ತೇವೆ. ಈ ತತ್ವವು ದುರುಪಯೋಗ ಪಡಿಸಲ್ಪಡಬಹುದು. ಸ್ವೀಕರಿಸುವ ಸಭೆಯು ಇತರ ಸಭೆಗಳ ಮೇಲೆ ಅವಲಂಬಿಸಿರುವದರಿಂದ ಬಲಹೀನ ಗೊಳಿಸಲ್ಪಡಬಹುದು ಎಂದು ಒಬ್ಬನು ಹೇಳಬಹುದು. ಕಳುಹಿಸುವ ಸಭೆಯು ಬಹಳ ಮಹತ್ವದ್ದಾಗಲು ಪ್ರಯತ್ನಿಸುತ್ತದೆ ಎಂದು ಹೇಳಬಹುದು. ಮಾನವರು ಏನೇ ಹೇಳಲಿ, ಅಪೊಸ್ತಲಿಕ ಉದಾಹರಣೆಯು ಒಂದು ಸಭೆಯು ಇನ್ನೊಂದು ಸಭೆಗೆ ತನ್ನ ಸ್ವಂತ ಕೆಲಸದಲ್ಲಿ ಸಹಾಯ ಮಾಡುವುದು ಸರಿಯೆಂದು ಅದನ್ನು ಮಾಡುತ್ತದೆ. ಹೀಗಿದ್ದರೂ, ಈ ಉದಾಹರಣೆಯು ಬಂಧನಕಾರಿಯಾಗಿದದ್ದಾಗಿರುವದೆಂದು ಹೇಳಬಹುದೋ? ಸ್ಥಳಿಕ ಸಭೆಯಲ್ಲಿ ಭಕ್ತಿ ವೃದ್ಧಿಯಾಗಲು ಇದೊಂದೇ ಮಾರ್ಗವಿರುವುದೋ? ನಿಶ್ಚಯವಾಗಿಯೂ ಅಲ್ಲ. "... ದೇಹವೆಲ್ಲ ಆತನ ದೊರೆತನದಲ್ಲಿದ್ದು ತನ್ನಲ್ಲಿರುವ ಎಲ್ಲಾ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯ ಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುವುದು" ಎಂದು ಎಫೆಸ 4:16 ಹೇಳುತ್ತದೆ, ಹೀಗಿದ್ದರೂ ಈ ಉದಾಹರಣೆಯು ಹೊಸ ಒಡಂಬಡಿಕೆಯಲ್ಲಿ ಮನ್ನಣೆ ಹೊಂದಿದ ಒಂದು ಮಾರ್ಗವಾಗಿದೆ.

ಸಹೋದರರ ಒಂದು ಗುಂಪು ಇನ್ನೊಂದು ಸಭೆಗೆ ಇಲ್ಲವೇ ಸಭೆಗಳಿಗೆ ಧನಸಹಾಯ ಕಳುಹಿಸಿದ ಇನ್ನೊಂದು ಉದಾಹರಣೆಯನ್ನು ಅಪೊಸ್ತಲರ ಕೃತ್ಯಗಳು 11 ಕೊಡುತ್ತದೆ. ಅಂಥದ್ದು (1) ಅತ್ಯವಸರದ ಸಮಯದಲ್ಲಿ, (2) ಪರಿಹಾರವು ಸಹೋದರರಿಗೆ ಮಾತ್ರವೇ ಇರತಕ್ಕದ್ದು, (3) ನಿರ್ದಿಷ್ಟವಾದ ಸಂಘಟನೆ ಇಲ್ಲವೇ ಸಭಾಪ್ರಾಂತ್ಯದ ಮಿತಿಗಳೊಳಗೆ ಮಾತ್ರವೇ ಉಪಯೋಗಿಸಲ್ಪಡಬೇಕು ಮತ್ತು (4) ಅದು ಸಹೋದರರ ಕೈಗಳಿಂದ ಕಳುಹಿಸಲ್ಪಟ್ಟಿರಬೇಕು ಎಂದು ಒಬ್ಬನು ವಾದಿಸಬಹುದು. ಅಂಥ ವಿವೇಚ

ನೆಯು ವಿಷಯವನ್ನು ಅತಿಶಯವಾಗಿ ಒತ್ತಿಹೇಳುವಂಥದ್ದಾಗಿರುತ್ತದೆ. ಇನ್ನೊಂದು ಸಭೆಗೆ ಸಹಾಯ ಮಾಡಲು ಒಂದು ಸಭೆಯು ಹಣವನ್ನು ಕಳುಹಿಸುವುದು ಸ್ವಂತ ಅಧಿಕಾರವನ್ನು ಹಾಳು ಮಾಡುತ್ತದೆ ಎಂದು ವಾದಿಸುವುದು ಅಂತಿಯೋಕ್ಯದಲ್ಲಿಯ ಸಭೆಯು ಸ್ವಾಯತ್ತತೆಯನ್ನು ಕಳೆದುಕೊಂಡಿತು ಎಂದು ವಾದಿಸುವಂತಿದೆ. ಸಹಾಯ ಕೊಡವವರು ತಪ್ಪುಮಾಡುತ್ತಾರೆ ಎಂದು ಹೇಳುವುದು ಯೂದಾಯದಲ್ಲಿಯ ಹಿರಿಯರು ತಪ್ಪು ಮಾಡಿದರು ಎಂದು ಹೇಳಿದಂತಾಗುತ್ತದೆ. ಅವರ ಮೂಲಗಳಿಗಿಂತಲೂ ಅತೀ ದೊಡ್ಡದಾದ ಪರಿಹಾರ ಕಾರ್ಯ ಯೋಜನೆಯ ಸಹಾಯಕರಾಗಿದ್ದರು. ಸಹಾಯಕ ಅಂದರೆ "ಒಬ್ಬನು ವಹಿಸಿಕೊಳ್ಳುವುದು, ಇಲ್ಲವೇ ಯಾವುದೋ ಇತರ ವ್ಯಕ್ತಿಗಾಗಿ ಇಲ್ಲವೇ ಸಂಗತಿಗಾಗಿ ಜವಾಬ್ದಾರಿಕೆ ಒಪ್ಪಿಸಿಕೊಡುವುದು ಎಂದು ಡಿಕ್ಶನರಿಯು ಹೇಳುತ್ತದೆ."

ಅಪೊಸ್ತಲರ ಕೃತ್ಯವನ್ನು ಓದುತ್ತಾ ಹೋಗುವಾಗ ಅಧ್ಯಾಯ 13 ಮತ್ತು 14ರಲ್ಲಿ ಸಭೆಯು ಸಭೆಯ ಪ್ರಸಂಗಿಗಳನ್ನು ಕಳುಹಿಸಿತು ಮತ್ತು ಸಭೆಯು ಅವರ ವರದಿಗಳನ್ನು ಸ್ವೀಕರಿಸಿತು ಎಂಬುದನ್ನು ನೋಡುತ್ತೇವೆ. ಯಾವುದೇ ಮಿಶನರಿ ಸೊಸೈಟಿಯ ಉದಾಹರಣೆಯು ಕೊಡಲ್ಪಡದೇ ಇದ್ದುದರಿಂದ, ಸಭೆಯು ದೇವರ ಮಿಶನರಿ ಸೊಸೈಟಿ ಆಗಿರಬೇಕೆಂಬ ಅಪೊಸ್ತಲಿಕ ಉದಾಹರಣೆಯು ಬಂಧನಕಾರಿಯಾಗಿದೆ. ಅಪೊಸ್ತಲರ ಕೃತ್ಯಗಳು 14:23ರಲ್ಲಿ ಪ್ರತಿಯೊಂದು ಸಭೆಯಲ್ಲಿ ಹೆಚ್ಚು ಜನ ಹಿರಿಯರು ಇರುವದನ್ನು ಕಂಡುಕೊಳ್ಳುತ್ತೇವೆ. ಪರಿಶುದ್ಧ ಬರಹಗಳಲ್ಲಿ ಬೇರೆ ಉದಾಹರಣೆಯು ಕಂಡು ಬಾರದೇ ಇದ್ದುದರಿಂದ, ಈ ಉದಾಹರಣೆಯು ಬಂಧನಕಾರಿಯೆಂದು ತೆಗೆದುಕೊಳ್ಳತಕ್ಕದ್ದು.

ಅಪೊಸ್ತಲರ ಕೃತ್ಯಗಳು 18:3ರಲ್ಲಿ ಪೌಲನು ತನ್ನ ಆದಾಯಕ್ಕೆ ಕೂಡಿಸಿ ಕೊಳ್ಳಲು ಗುಡಾರ ನೇಯುವದನ್ನು ಮಾಡಿದನೆಂದು ಕಲಿತು ಕೊಳ್ಳುತ್ತೇವೆ. ಇದು ಬಂಧನಕಾರಿಯಾದ ಉದಾಹರಣೆಯಾಗಿರುವುದೋ? ಒಬ್ಬನು ಬಡಿಗನಾಗಿರಬಹುದೋ ಒಬ್ಬನು ಸಭೆಯಿಂದಲೇ ಎಲ್ಲವನ್ನೂ ಪಡೆಯುವ ಪ್ರಸಂಗಿಯಾಗಿರಬಹುದೋ? ನಿಶ್ಚಯವಾಗಿ, ಈ ವಿಷಯದಲ್ಲಿ ಸುವಾರ್ತಾ ಪ್ರಸಂಗಿಗಳಿಗೆ ಆಯ್ಕೆಯನ್ನು ಬಿಟ್ಟಿರುವದನ್ನು ಪರಿಶುದ್ಧ ಬರಹಗಳು ಸ್ಪಷ್ಟಪಡಿಸುತ್ತವೆ (1 ಕೊರಿಂಥ 9:11-14; 2 ಕೊರಿಂಥ 11:8). ಅಪೊಸ್ತಲಿಕ ಗುಡಾರ ನೇಯುವ ಉದಾಹರಣೆಯು ಬಂಧನಕಾರಿಯಾಗಿರುವದಿಲ್ಲ.

ಅಪೊಸ್ತಲರ ಕೃತ್ಯಗಳು 20:7-9ರಲ್ಲಿ, ರೊಟ್ಟಿಮುರಿಯುವದಕ್ಕಾಗಿ ಕರ್ತನ ದಿನದಂದು ಮೂರನೆಯ ಅಂತಸ್ತಿನಲ್ಲಿ ರಾತ್ರಿ ಕೂಟವು ಏರ್ಪಡಿಸಲ್ಪಟ್ಟದ್ದನ್ನು ನೋಡುತ್ತೇವೆ. ರಾತ್ರಿಯಲ್ಲಿ ಕೂಡಿಬರುವದರಲ್ಲಿ ಒಂದು ತತ್ವವು ಒಳಗೊಂಡಿರುವುದೋ? ... ಮೂರನೆ ಮಹಡಿಯಲ್ಲಿ? ... ಕರ್ತನ ದಿನದಂದು? ಇತರ ಪರಿಶುದ್ಧ ಬರಹಗಳು (ಇಬ್ರಿಯ 10:25; ಪ್ರಕಟನೆ 1:10) ಕೇವಲ ವಾರದ ದಿನವು ಸಂಬಂಧಿಸಿರುವುದೆಂದು ಹೇಳುತ್ತವೆ.

ದೇವರು ತನ್ನ ಹೊಸ ಒಡಂಬಡಿಕೆಯಲ್ಲಿ ಅತ್ಯವಶ್ಯಕವಲ್ಲದ ಹಾಗೂ ದೈವಿಕ ತತ್ವಗಳ ಮಧ್ಯದಲ್ಲಿ ಭಿನ್ನತೆ ಮಾಡುವದನ್ನು ನಾವು ಕಲಿತುಕೊಳ್ಳ ಬೇಕೆಂಬುದನ್ನು ಬಯಸುತ್ತಾನೆ.

© 2009 Truth for Today